

# ಪುಸ್ತಕ ನಗರಿ

■ ವಿದ್ಯಾ ವಿ. ಹಾಲಭಾವಿ

**ಹೇ** ಆನ್ ವೀ (Hay–on–wye) ಎನ್ನುವುದೊಂದು ಪುಟ್ಟ ಹಳ್ಳಿ. ವೇಲ್ಸ್ ಮತ್ತು ಇಂಗ್ಲೆಂಡಿನ ಗಡಿಯಲ್ಲಿರುವ ಈ ಪುಟ್ಟ ಪಟ್ಟಣದ ಜನಸಂಖ್ಯೆ ಸುಮಾರು 2000 ಅಷ್ಟೆ! ಆದರೆ ಇದು ಜಗತ್ತಿನಾದ್ಯಂತ ಹೆಸರುವಾಸಿ ಆಗಿರುವುದು ಪುಸ್ತಕದ ನಗರ ಎಂದೇ. ಏಕೆಂದರೆ ಇಲ್ಲಿ ಎಲ್ಲಿ ನೋಡಿದರೂ ಪುಸ್ತಕದ ಅಂಗಡಿಗಳೇ ಕಾಣಿಸುತ್ತವೆ. ಸೆಕೆಂಡ್ ಹ್ಯಾಂಡ್ ಪುಸ್ತಕಗಳಿಗೆ ಇದು ಅತ್ಯಂತ ಹೆಸರುವಾಸಿ ಆಗಿರುವುದರಿಂದ ಜಗತ್ತಿನ ಎಲ್ಲ ಕಡೆಗಳಿಂದಲೂ ಇಲ್ಲಿಗೆ ಪುಸ್ತಕ ಪ್ರೇಮಿಗಳು ಭೇಟಿ ಕೊಡುತ್ತಾರೆ.

ಪ್ರತಿ ವರ್ಷ ಮೇ– ಜೂನ್ ತಿಂಗಳಲ್ಲಿ ಇಲ್ಲಿ ಹತ್ತು ದಿನಗಳ ಕಾಲ ಸಾಹಿತ್ಯೋತ್ಸವವೊಂದು ನಡೆಯುತ್ತದೆ. ‘ಹೇ ಫೆಸ್ಟಿವಲ್’ ಎಂದೇ ಹೆಸರಾಗಿರುವ ಈ ಉತ್ಸವಕ್ಕೆ ಜಗತ್ತಿನಾದ್ಯಂತ 80 ಸಾವಿರಕ್ಕೂ ಹೆಚ್ಚು ಸಾಹಿತ್ಯಾಸಕ್ತರು ಬಂದು ಸೇರುತ್ತಾರೆ! ಅತ್ಯಧಿಕ ಸಂಖ್ಯೆಯ ಪುಸ್ತಕಗಳು ಮಾರಾಟವಾಗುತ್ತವೆ. ಜತೆಗೆ ಸಾಹಿತ್ಯ ಮತ್ತು ಸಂಗೀತ ಗೋಷ್ಠಿಗಳೂ ಇರುತ್ತವೆ. ಲೇಖಕರು, ಪ್ರಕಾಶಕರು, ಗ್ರಾಹಕರ ದೊಡ್ಡ ದಂಡೇ ನೆರೆಯುತ್ತದೆ. 1988ರಿಂದ ನಡೆಯುತ್ತಿರುವ ಈ ಸಾಹಿತ್ಯೋತ್ಸವ ಎಷ್ಟು ಜನಪ್ರಿಯವಾಗಿದೆ–ಯೆಂದರೆ ಜಗತ್ತಿನ ಖ್ಯಾತ ಸಾಹಿತಿಗಳೆಲ್ಲರೂ ಭೇಟಿ ನೀಡುತ್ತಾರೆ. ಈಗ ‘ದಿ ಡೇಲಿ ಟೆಲಿಗ್ರಾಫ್’ ಪತ್ರಿಕೆಯು ಈ ಸಾಹಿತ್ಯೋತ್ಸವವನ್ನು ಪ್ರಾಯೋಜಿಸುತ್ತಿದೆ.

ಉತ್ಸವದ ಸಮಯದಲ್ಲಿ ಇಲ್ಲಿ ಮನೆಗಳ ಬಾಡಿಗೆ ಗಗನಕ್ಕೇರುತ್ತದೆ. ಹಾಗಾಗಿ ಸುತ್ತಮುತ್ತಲ ಹಳ್ಳಿಗಳಲ್ಲಿ ಉಳಿದುಕೊಂಡು ಇಲ್ಲಿಗೆ ಓಡಾಡುವುದು ಒಳ್ಳೆಯದು. ಉತ್ಸವ ನಡೆಯುವ ಸಂದರ್ಭದಲ್ಲಿ ಊರೊಳಗೇ ಟೆಂಟ್‌ಗಳೂ ಬಾಡಿಗೆಗೆ ಸಿಗುತ್ತವೆ. ಅದರಲ್ಲಿ ದುಬಾರಿ ಮತ್ತು ಬಜೆಟ್ ಟೆಂಟ್‌ಗಳೂ ಇವೆ.

ಈ ಪುಟ್ಟ ಊರಲ್ಲಿ ಉತ್ಸವ ಇಲ್ಲದಾಗೂ 30ಕ್ಕೂ ಹೆಚ್ಚು ಪುಸ್ತಕ ಮಳಿಗೆಗಳು ಕಾರ್ಯ ನಿರ್ವಹಿಸುತ್ತವೆ. ಗೋಡೆ, ಮನೆಯ ಹಿಂಭಾಗ, ರಸ್ತೆ ಪಕ್ಕ, ಓಣಿಗಳಲ್ಲಿ– ಹೀಗೆ ಎಲ್ಲೆಂದರಲ್ಲಿ ಪುಸ್ತಕದ ಮಳಿಗೆಗಳು! ಈ ಪಟ್ಟಣ ಎಷ್ಟು ಪುಟ್ಟದೆಂದರೆ ಒಂದು ತುದಿಯಿಂದ ಇನ್ನೊಂದು ತುದಿಗೆ ಅರ್ಧ ಗಂಟೆಯಲ್ಲಿ ನಡೆದು ಹೋಗಬಹುದು.

ರಿಚರ್ಡ್ ಬೂತ್ ಎಂಬಾತ ಮೊತ್ತ ಮೊದಲು 1961ರಲ್ಲಿ ಹೇ ಯಲ್ಲಿ ತನ್ನ ಸೆಕೆಂಡ್ ಹ್ಯಾಂಡ್ ಪುಸ್ತಕದ ಮಳಿಗೆಯನ್ನು ತೆರೆದ. ಅದು ಆರಂಭ–ವಾದದ್ದು ಹಳೆಯ ಅಗ್ನಿಶಾಮಕ ಠಾಣೆಯ ಕಟ್ಟಡದಲ್ಲಿ. ಅಮೆರಿಕಾದಲ್ಲಿ ಗ್ರಂಥಾಲಯಗಳು ಶೀಘ್ರ ಗತಿಯಲ್ಲಿ ಮುಚ್ಚುತ್ತಿದ್ದ ಸಂದರ್ಭದಲ್ಲಿ ರಿಚರ್ಡ್ ಬೂತ್ ಇಬ್ಬರು ಗಟ್ಟಿಮುಟ್ಟಾದ ಯುವಕರನ್ನು ಕರೆದೊಯ್ದು ಅಲ್ಲಿನ ಪುಸ್ತಕಗಳನ್ನೆಲ್ಲ ಖರೀದಿಸಿ ಹಡಗಿನ ಮೂಲಕ ತನ್ನೂರಿಗೆ ಸಾಗಿಸಿದನಂತೆ. ಆತನ ಮಳಿಗೆ ಅಲ್ಲಿ ಆರಂಭವಾದ ಬಳಿಕ ಬೇರೆ ಪ್ರಕಾಶಕರು ಈ ಊರಲ್ಲಿ ತಮ್ಮ ಮಾರಾಟ ಶಾಖೆ ತೆರೆದರಂತೆ. 1970ರ ವೇಳೆಗೆ ಈ ಪುಟ್ಟ ನಗರ ಪ್ರಪಂಚ–ದಾದ್ಯಂತ ಪುಸ್ತಕಪ್ರೇಮಿಗಳನ್ನು ಆಕರ್ಷಿಸತೊಡಗಿತು. ಈಗಂತೂ ಪುಸ್ತಕ–ಪ್ರೇಮಿಗಳ ಮೆಕ್ಕಾ ಎಂದೇ ಈ ಊರನ್ನು ಕರೆಯಲಾಗುತ್ತಿದೆ. ಒಂದು ಅಂದಾಜಿನ ಪ್ರಕಾರ, ಪ್ರತಿ ವರ್ಷ ಈ ಊರಿಗೆ 5 ಲಕ್ಷಕ್ಕೂ ಹೆಚ್ಚು ಪುಸ್ತಕ–ಪ್ರೇಮಿಗಳು ಭೇಟಿ ಕೊಡುತ್ತಾರೆ. ಪ್ರವಾಸಿಗರೂ ಈ ಊರಿಗೆ ಬರುತ್ತಿದ್ದು, ಇಲ್ಲಿನ ಹಳೆಯ ಕೋಟೆ ಕೊತ್ತಳಗಳನ್ನು ನೋಡಿಕೊಂಡು ಹೋಗುತ್ತಾರೆ.

ಹೇ ಆನ್ ವೀ ಯ ‘ಹಾನೆಸ್ಟಿ ಬುಕ್ ಶಾಪ್’ ಎನ್ನುವ ಮಳಿಗೆಗಳಂತೂ ಅತ್ಯಂತ ವಿಶಿಷ್ಟವಾದದ್ದು. ಅಲ್ಲಿ ಗೋಡೆಯ ಶೆಲ್ಫ್‌ಗಳಲ್ಲಿ ಪುಸ್ತಕಗಳನ್ನು ಅಚ್ಚುಕಟ್ಟಾಗಿ ಜೋಡಿಸುವುದಿಲ್ಲ, ಬದಲಾಗಿ ಪುಸ್ತಕಗಳನ್ನು ಹಾಗೆಯೇ ಅಲ್ಲಲ್ಲಿ ಇರಿಸುತ್ತಾರೆ. ಮಳಿಗೆಯಾತನೂ ಇರುವುದಿಲ್ಲ. ಅಥವಾ ಆತ ತನ್ನ ಇನ್ನೇನೋ ಕೆಲಸದಲ್ಲಿ ಮಗ್ನನಾಗಿರುತ್ತಾನೆ. ಜನರು ತಮಗಿಷ್ಟವಾದ ಪುಸ್ತಕಗಳನ್ನು ತೆಗೆದುಕೊಂಡು ಅಲ್ಲಿರಿಸಿದ ಅಂಚೆ ಪೆಟ್ಟಿಗೆಯಲ್ಲಿ ಹಣವನ್ನು ಹಾಕಬಹುದು.

ನಗರದ ಹೃದಯ ಭಾಗದಲ್ಲಿರುವ 12ನೇ ಶತಮಾನದ ಕೋಟೆಯ ಮುಂಭಾಗದಲ್ಲಿ ಹಾನೆಸ್ಟಿ ಬುಕ್ ಶಾಪ್‌ಗಳನ್ನು ಕಾಣಬಹುದು. ಹೇ ಲಿಟರರಿ ಫೆಸ್ಟಿವಲ್ ಡೇವಿಡ್ ಸೈಮನ್, ಸ್ಟೀಫನ್ ಫ್ರೈ, ಸಲ್ಮಾನ್ ರಶ್ದಿ, ಸೈಮನ್ ಸಿಂಗ್ ಮುಂತಾದ ಖ್ಯಾತನಾಮ ಬರಹಗಾರರನ್ನೂ ತನ್ನತ್ತ ಸೆಳೆಯುವಲ್ಲಿ ಯಶಸ್ವಿ–ಯಾಗಿದೆ. 2001ರಲ್ಲಿ ಈ ಉತ್ಸವವನ್ನು ‘ದಿ ವುಡ್ ಸ್ಟಾಕ್ ಆಫ್ ದಿ ಮೈಂಡ್’ ಎಂದು ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ವರ್ಣಿಸಿದ್ದಾರೆ.